ದಿನಾಂಕಃ 06-12-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ ಜಿ ಎಚ್ ವಕೀಲರಿಂದಃ

ಈ ಪ್ರಕರಣದಲ್ಲಿ ನನ್ನ ಪರವಾಗಿ ಉದಾಹರಣೆ ಸಲ್ಲಿಸಲು ನಮ್ಮ ಕಚೇರಿಯಲ್ಲಿರುವ ದಾಖಲೆಗಳನ್ನು ನೋಡಿ ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದಿಯರು ಜನ್ಮತಃ ಮೀನುಗಾರರ ಸಮುದಾಯಕ್ಕೆ ಸೇರಿದವರು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲಾ. ವಾದಿಯರ ಕುಟುಂಬದವರು ಕುಮಟಾ ತಾಲೂಕಿನ ಬೆಟ್ಕುಳಿಯ ಬರ್ಗಿ ಗಜನಿಗೆ ಸರ್ಕಾರದವರು ಕಾರ್ಲೆಂಡ್ ಕಟ್ಟಿಧ ಜಂತ್ರಡಿ ಪಕ್ಕದಲ್ಲಿ ಮೀನುಗಾರಿಕೆಯನ್ನು ಮಾಡಿ ಬಂದಿದ್ದರು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲಾ. ನಮ್ಮ ಬಂದರು ಇಲಾಖೆಯವರು 1970-71 ರ ಸುಮಾರಿಗೆ ಮೀನುಗಾರಿಕೆ ನಡೆಸಿಕೊಂಡು ಹೋಗುವವರಿಗೆ ಪರವಾನಿಗೆಯನ್ನು ಕೊಟ್ಟಿದ್ದರು ಎಂದರೆ ಸರಿ. ಅದರಂತೆ ಮೀನುಗಾರರ ಬೇಡಿಕೆಯಂತೆ 1992 ರಲ್ಲಿ ಆದೇಶ ಸಂಖ್ಯೆ ಪಿಎಎಸ್ಸಿಆರ್ 21/91-92 ದಿನಾಂಕ 21-1-1992 ರಂದು ತಿಪ್ಪ ಗಣಪು ಹರಿಕಂತ್ರ ಹಾಗೂ ವಾದಿಯರಿಗೆ ದಿನಾಂಕ 30-9-1992 ರವರೆಗೆ ನದಿಪಾತ್ರದಲ್ಲಿ ಗುಟ್ಟಗಳನ್ನು ಹುಗಿದು ಅದಕ್ಕೆ ಬಲೆ ಕಟ್ಟಿ ಮೀನುಗಾರಿಕೆ ನಡೆಸಲು ಬಂದರು ಇಲಾಖೆಯವರು ಪರವಾನಿಗೆ ಕೊಟ್ಟಿದ್ದರು ಎಂದರೆ ಸರಿ. ವಾದಿಯರು 1992 ನೇ ಇಸ್ವಿಯಲ್ಲಿ ಮೂಲದಾವಾ ನಂಬರ 164/1992 ನೇದನ್ನು ನಮ್ಮ ಇಲಾಖೆಯ ವಿರುದ್ಧ ದಾಖಲಿಸಿದ್ದರು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲಾ. ತಿಪ್ಪ ಗಣಪು ಹರಿಕಂತ್ರ ಈತನಿಗೆ ನಮ್ಮ ಇಲಾಖೆಯಿಂದ ನೀಡಿದಂತಹ ಪರವಾನಿಗೆ ಅಂತ್ಯ ಗೊಂಡಿದೆ ಎಂದರೆ ಸರಿ. ವಾದಿಯರಿಗೆ ಬೆಟ್ಕುಳಿ ಬರ್ಗಿ ಗಜನಿಯಲ್ಲಿ ಗುಟ್ಟಗಳನ್ನು ಹುಗಿದು ಅದಕ್ಕೆ ಬಲೆ ಕಟ್ಟಿ ಮೀನುಗಾರಿಕೆ ನಡೆಸುವ ರೂಡಿಜನ್ಯ ಹಕ್ಕು ಪ್ರಾಪ್ತವಾಗಿದೆ ಎಂದರೆ ಆ ರೀತಿ ಯಾವುದೇ ಅವಕಾಶ ಇಲ್ಲಾ. ನಮ್ಮ ಇಲಾಖೆಯವರು ಮೀನುಗಾರಿಕೆ ನಡೆಸಲು ಮೀನುಗಾರರಿಗೆ ಪ್ರಸ್ತುತ ಯಾವುದೇ ಪರವಾನಿಗೆ ಕೊಡುತ್ತಿಲ್ಲಾ ಎಂದರೆ ಸರಿ. ತಿಪ್ಪ ಗಣಪು ಹರಿಕಂತ್ರ ಈತನು ಮೃತಪಟ್ಟ ನಂತರ ಈ ದಾವೆಯ 4 ರಿಂದ 11 ನೇ ಪ್ರತಿವಾದಿಯರಿಗೆ ನಮ್ಮ ಇಲಾಖೆಯಿಂದ ಯಾವುದೇ ಪರವಾನಿಗೆ ಕೊಟ್ಟಿಲ್ಲಾ ಎಂದರೆ ಸರಿ. ಮೀನುಗಾರರು ಬೆಟ್ಕುಳಿ ಬರ್ಗಿ ಗಜನಿಯಲ್ಲಿ ಅಲ್ಲದೇ ಕರ್ನಾಟಕದ ಎಲ್ಲಾ ಭಾಗಗಲ್ಲಿಯೂ ಸಾಂಪ್ರದಾಯಕವಾಗಿ ಮೀನುಗಾರಿಕೆ ನಡೆಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಅದರಂತೆ ಈ ದಾವೆಯ ವಾದಿಯರು ಬೆಟ್ಕುಳಿ ಬರ್ಗಿ ಗಜನಿ ನದಿಪಾತ್ರದಲ್ಲಿ ಗುಟ್ಟಗಳನ್ನು ಹುಗಿದು ಅದಕ್ಕೆ ಬಲೆ ಕಟ್ಟಿ ಸಾಂಪ್ರದಾಯಿಕ ಮೀನುಗಾರಿಕೆ ನಡೆಸಲು ನಮ್ಮದು ಯಾವುದೇ ತಕರಾರು ಇಲ್ಲಾ. ವಾದಿಯರು ಅವರ ಪೂರ್ವಜರ ಕಾಲದಿಂದಲೂ ಬೆಟ್ಕುಳಿ ಬರ್ಗಿ ಗಜನಿ ನದಿಪಾತ್ರದಲ್ಲಿ ಬೇರೆಯವರಿಗೆ ತೊಂದರೆಯಾಗದಂತೆ ಗುಟ್ಟಗಳನ್ನು ಹುಗಿದು ಅದಕ್ಕೆ ಬಲೆ ಕಟ್ಟಿ ಸಾಂಪ್ರದಾಯಿಕ ಮೀನುಗಾರಿಕೆ ನಡೆಸಿಕೊಂಡು ಬಂದಂತೆ ಇನ್ನೂ ಮುಂದೆಯೂ ನಡೆಸಿಕೊಂಡು ಹೋಗಲು ನಮ್ಮದು ಯಾವುದೇ ತಕರಾರು ಇರುವುದಿಲ್ಲಾ. ಈ ದಾವೆಯ ವಾದಿಯರಿಗೆ ಮೀನುಗಾರಿಕೆ ಕಸುಬು ಜೀವನಕ್ಕೆ ಆಧಾರ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲಾ.

2. ದಿನಾಂಕ 21–11–2015 ರಂದು ಈ ದಾವೆಯನ್ನು ದಾಖಲಪಡಿಸುವ ಪೂರ್ವದಲ್ಲಿ ವಾದಿಯರು ನಮ್ಮ ಇಲಾಖೆಗೆ ಪೂರ್ವ ಸೂಚಿತ ನೋಟೀಸು ಕಳುಹಿಸಿದ್ದರು ಎಂದರೆ ಸರಿ. ಆ ನೋಟಿಸಿಗೆ ನಮ್ಮ ಇಲಾಖೆಯವರು ಯಾವುದೇ ಉತ್ತರ ಕೊಟ್ಟಿಲ್ಲಾ ಎಂದರೆ ಸರಿ. ನದಿಪಾತ್ರಗಳಲ್ಲಿ ಅನುವಂಶಿಕ ಮೀನುಗಾರಿಕೆ ನಡೆಸುವ ಕುರಿತು ಪರವಾನಿಗೆಯನ್ನು ಪ್ರಸ್ತುತ ಮೀನುಗಾರಿಕೆ ಇಲಾಖೆಯವರು ಕೊಡುತ್ತಿದ್ದಾರೆ. ನಾನು ದಾವಾ ಆಸ್ತಿಯ ಸ್ಥಳ ಪರಿಶೀಲನೆ ಮಾಡಿಲ್ಲಾ. ತಿಪ್ಪ ಗಣಪು ಹರಿಕಂತ್ರ ಮೃತಪಟ್ಟ ನಂತರ ಅವನ ವಾರಸುದಾರರಾದ 4 ರಿಂದ 11 ನೇ ಪ್ರತಿವಾದಿಯರು ನಮ್ಮ ಇಲಾಖೆಗೆ ಪರವಾನಿಗೆ ಕೊಡುವಂತೆ ಕೇಳಿ ಯಾವುದೇ ಅರ್ಜಿ ಕೊಟ್ಟಿದ್ದು ಇಲ್ಲಾ ಎಂದರೆ ಸರಿ. ನನಗೆ ಈಗ ನಿಪಿ 30 ರಿಂದ ನಿಪಿ 34 ರ ಪೊಟೋಗಳನ್ನು ತೋರಿಸುತ್ತಿದ್ದು ಅದರಲ್ಲಿ ವಾದಿಯರು ಗುಟ್ಟಗಳನ್ನು ಹುಗಿದು ಮೀನುಗಾರಿಕೆ ನಡೆಸುವ ಸ್ಥಳ ಕಾಣಿಸುತ್ತಿದೆ ಎಂದರೆ ಸರಿ. ಸದರಿ ಪೊಟೋಗಳಲ್ಲಿ ಕಂಡು ಬುರುವಂತೆ ವಾದಿಯರು ಗುಟ್ಟಗಳನ್ನು ಹುಗಿದು ಬಲೆ ಕಟ್ಟಿಕೊಂಡು ಅನುವಂಶಿಕವಾಗಿ ಸಾಂಪ್ರದಾಯಿಕ ಮೀನುಗಾರಿಕೆ ನಡೆಸಿದರೆ ನದಿಯಲ್ಲಿ ದೋಣಿಗಳು ಸಂಚರಿಸಲು ಯಾವುದೇ ತೊಂದರೆಯಾಗುವುದಿಲ್ಲಾ ಎಂದರೆ ಪೂರ್ತಿ ನದಿಯ ಛಾಯಾಚಿತ್ರ ನೋಡದ ಹೊರತು ಹೇಳಲು ಆಗುವುದಿಲ್ಲಾ. ನದಿಗಳಲ್ಲಿ ದೋಣಿಗಳು ಸಂಚರಿಸುವಾಗ ಸಾಮಾನ್ಯವಾಗಿ ಮಧ್ಯದಲ್ಲಿ ಅಂದರೆ ಆಳ ಇರುವಲ್ಲಿ ಸಂಚರಿಸುತ್ತವೆ ಎಂದರೆ ಸರಿ. ನಿಪಿ 30 ರಿಂದ 34 ರ ಪೊಟೊಗಳಲ್ಲಿ ಕಂಡು ಬರುತ್ತಿರುವಂತೆ ಗುಟ್ಟಗಳನ್ನು ಹುಗಿದಿರುವಲ್ಲಿ ಮೀನುಗಾರರು ನಿಂತುಕೊಂಡು ಮೀನು ಹಿಡಿಯುತ್ತಾರೆ ಎಂದರೆ ಸರಿ. ನಮ್ಮ ಇಲಾಖೆಯವರು ಮೀನುಗಾರರ ಸಹಕಾರಿ ಸಂಘ, ತದಡಿ ಇವರಿಗೆ ಮೀನುಗಾರಿಕೆ ನಡೆಸಲು ಯಾವುದೇ ಪರವಾನಿಗೆ ಕೊಟ್ಟಿಲ್ಲಾ. ವಾದಿಯರು ಅವರ ಅಜ್ಜನ ಕಾಲದಿಂದಲೂ ನಿಪಿ 30 ರಿಂದ 34 ರ ಪೊಟೊಗಳಲ್ಲಿ ಕಂಡು ಬರುವ ಜಾಗದಲ್ಲಿ ಮೀನುಗಾರಿಗೆ ನಡೆಸಿ ಬಂದಿದ್ದಾರೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲಾ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಗುಟ್ಟಗಳನ್ನು ಹುಗಿದು ಬಲೆಯನ್ನು ಕಟ್ಟಿ ಸಾಂಪ್ರದಾಯಿಕ ಮೀನುಗಾರಿಕೆ ನಡೆಸಲು ಪ್ರಾಪ್ತವಾಗಿದೆ ಎಂದರೆ ಸರಿಯಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಕುಮಟಾ.